ಹೋಗಿದ್ದ ಉಡುಗೊರೆಯನ್ನು ಕೊಟ್ಟು ಹೋಗಿ ಊಟ ಮುಗಿಸಿ ಹೊರಗೆ ಬರುವ ವೇಳೆಗೆ ಜೋರು ಮಳೆ. 'ಈ ಮಳೆಯಲ್ಲಿ ಎಲ್ಲಿಗೆ ಹೋಗುವುದು? ನನಗೆ ಅರ್ಜೆಂಟ್ ಮೀಟಿಂಗ್ ಬೇರೆ ಇದೆ. ನೆಕ್ಸ್ಟ್ ವೀಕ್ ಹೋಗೋಣ' ಎಂದು ನನ್ನವರು ಹೇಳಿದಾಗ ನನ್ನ ಆಸೆಗೆ ತಣ್ಣೀರೆರಚಿದಂತಾಯಿತು.

'ಈ ಶನಿವಾರ ನಾವು ಸೀರೆ ತೆಗೆದುಕೊಳ್ಳಲು ಚಿಕ್ಕಪೇಟೆಗೆ ಹೋಗ್ತಾ ಇದೀವಿ' ಎಂದು ಅಕ್ಕ ಫೋನಿನಲ್ಲಿ ಹೇಳಿದ ತಕ್ಷಣ ನನ್ನ ಕಿವಿ ನೆಟ್ಟಗಾಯಿತು. 'ಸರಿ, ಶನಿವಾರ ನನಗೂ ಸ್ವಲ್ಪ ಕೆಲಸ ಇದೆ, ನಾನೂ ಬರ್ತೀನಿ' ಎಂದು ಟಾಪ್‌ಗಳ ಬ್ಯಾಗ್ ತಗುಲಿಸಿಕೊಂಡು ಹೊರಟೆ. ಆಟೋದವನು ಮಾರ್ಕೆಟ್ ಬಳಿ ಬಂದ ತಕ್ಷಣ ಅಲ್ಲೇ ನಿಲ್ಲಿಸಿದ. 'ಯಾಕಪ್ಪ, ನಾನು ಭೈರಪ್ಪ ಸಿಲ್ಕ್ಸ್‌ಗೆ ಹೋಗಬೇಕು. ನೀನು ಇಲ್ಲಿ ನಿಲ್ಲಿಸಿದರೆ ಹೇಗೆ' ಎಂದು ದಬಾಯಿಸತೊಡಗಿದೆ. 'ನೋಡಿ ಮೇಡಂ, ಈ ಟ್ರಾಫಿಕ್‌ನಲ್ಲಿ ಹೇಗೆ ಹೋಗೋದು, ಇಲ್ಲಿಂದ ಟೌನ್ ಹಾಲ್‌ಗೆ ಹೋಗೋದಕ್ಕೇ ಒನ್ ಅವರ್ ಬೇಕು. ಇಲ್ಲೇ ಈ ಸಂದಿಯಲ್ಲಿ ನಡೆದುಕೊಂಡು ಹೋದರೆ ಬೇಗ ಹೋಗಬಹುದು' ಎಂದ. ಕೆಲವು ಆಟೋದವರನ್ನು ಮಾತನಾಡಿ ಗೆಲ್ಲುವುದು ಬಹಳ ಕಷ್ಟ. ಈ ಜನಜಂಗುಳಿ ದಾಟಿಕೊಂಡು ನಾನು ಹೋಗೋದು ಎಷ್ಟು ಕಷ್ಟ ಗೊತ್ತಾ ಎಂದು ಗೊಣಗುತ್ತಲೇ ದುಡ್ಡು ಕೊಟ್ಟು ಅಲ್ಲಲ್ಲಿ ವಿಚಾರಿಸಿಕೊಂಡು ಗಲ್ಲಿ ಗಲ್ಲಿಯಲ್ಲಿ ಕಿಕ್ಕಿರಿದ ರಸ್ತೆಯಲ್ಲಿ ಹೋಗಿ ನೋಡಿದರೆ ಅಕ್ಕ ಅಲ್ಲಿ ಇರಲಿಲ್ಲ. ಫೋನ್ ಮಾಡಿದರೆ ಕನೆಕ್ಟ್ ಆಗುತ್ತಿಲ್ಲ, ನನಗೆ ಗಾಬರಿಯಾಯಿತು.

'ಬನ್ನಿ ಮೇಡಂ... ಬನ್ನಿ... ಏನು ಬೇಕು, ರೇಷ್ಮೆ ಸೀರೆ ಬೇಕಾ? ಒಳ್ಳೆ ಕಲೆಕ್ಷನ್ ಇದೆ' ಎಂದು ಒಬ್ಬ ಮುಗಿಸಿ, ನಾನು ಬೇರೆ ದಿಕ್ಕಿಗೆ ತಲೆ ತಿರುಗಿಸುವಷ್ಟರಲ್ಲಿ, ಇನ್ನೊಬ್ಬ 'ಮೇಡಂ ಇಲ್ಲಿ ಬನ್ನಿ ಮೇಡಂ... ಇಲ್ಲಿ ಬನ್ನಿ. ನಿಮಗೆ ಒಳ್ಳೊಳ್ಳೆ ಸೀರೆಗಳಿವೆ, ಹಬ್ಬಕ್ಕೆ ಹೊಸ ಸ್ಟಾಕ್ ಬಂದಿದೆ' ಎನ್ನುತ್ತ ಕೂಗತೊಡಗಿದ. ನನಗೆ ತಲೆ ಚಿಟ್ಟು ಹಿಡಿದ ಹಾಗಾದರೂ ತೋರ್ಪಡಿಸದೆ, 'ಇಲ್ಲಪ್ಪ, ನಾನು ಅಕ್ಕನಿಗಾಗಿ ಕಾಯ್ತಾ ಇದೀನಿ' ಎಂದರೆ – 'ಬರಲಿ... ಬರಲಿ... ಅವರನ್ನೂ ಕರೆದುಕೊಂಡು ಬನ್ನಿ...' ಎಂದು ಅವನು ಹೇಳಿ ಮುಗಿಸುವಷ್ಟರಲ್ಲಿ, ಅಕ್ಕನ ಫೋನ್ ನೋಡಿ ತಕ್ಷಣ ಪಕ್ಕಕ್ಕೆ ಬಂದು ಮಾತನಾಡಿದೆ. 'ಸಾರಿ ಕಣೆ. ಇಲ್ಲೇ ಸುಮ್ಮನೆ ಸೀರೆ ನೋಡೋಣ ಅಂತ ಒಳಗೆಹೋದೆ. ಅಲ್ಲಿ ಸಿಗ್ನಲ್ ಪ್ರಾಬ್ಲಮ್. ಈಚೆ ಬಂದ ತಕ್ಷಣ ನಿನ್ನ ಮಿಸ್ ಕಾಲ್ ನೋಡಿ ಬಂದೆ. ಯೂ ಟ್ಯೂಬಿನಲ್ಲಿ ನೋಡಿ ಈ ಅಂಗಡಿಗೆ ಬಂದರೆ ಅಂತಹ ಯಾವ ಸೀರೆಗಳೂ ಇಲ್ಲಿಲ್ಲ, ಬೆಲೆ ಕೂಡ ದುಬಾರಿ. ಯಾಕೆ ಹೀಗೆ ಮಾಡುತ್ತೀರಿ ಎಂದು ಅಂಗಡಿಯವರನ್ನು ಕೇಳಿದರೆ, ಅವೆಲ್ಲ ಖಾಲಿಯಾಗಿವೆ ಮೇಡಂ, ಹಬ್ಬಕ್ಕೆ ಹೊಸ ಸ್ಟಾಕ್ ಬರಬೇಕಿದೆ ಅಂತ ಹೇಳಿದರು' ಎಂದಳು. ಅದಕ್ಕೆ ನಾನು, 'ಅಯ್ಯೋ, ಇವರೆಲ್ಲ ಗ್ರಾಹಕರನ್ನು ಸೆಳೆಯಲು ಹೀಗೆ ಆಟವಾಡುತ್ತಾರೆ. ಬಾ ಇನ್ನೊಂದು ಕಡೆ ನೋಡೋಣ' ಎಂದೆ, ಇಬ್ಬರೂ ಆಚೆ ಬಂದೆವು.

ಅಬ್ಬ! ಒಂದೊಂದು ರಸ್ತೆಯಲ್ಲಿ ಒಂದೊಂದು ರೀತಿಯ ಹೋಲ್‌ಸೇಲ್ ಮತ್ತು ರೀಟೇಲ್ ಶಾಪಿಂಗ್ ಅಂಗಡಿಗಳು. ಅಂದು ಚಿಕ್ಕಪೇಟೆಯಲ್ಲಿ ಎಂದಿಗಿಂತಲೂ ಹೆಚ್ಚು ಜನಜಂಗುಳಿ. ರಥೋತ್ಸವಗಳಲ್ಲಿ ಕಿಕ್ಕಿರಿದ ಜನರ ನಡುವೆ



ನಡೆಯಬೇಕಾದ ಅಗತ್ಯವಿಲ್ಲದೆ ತಳ್ಳಾಟದಲ್ಲಿಯೇ ಮುಂದೆ ಹೋಗುವಂತಾಗಿತ್ತು ನಮ್ಮ ಸ್ಥಿತಿ. ರಸ್ತೆಯುದ್ದಕ್ಕೂ ವಿವಿಧ ಸಾಮಗ್ರಿಗಳನ್ನು ಅಂಗಡಿಗಳಿಗೆ ಹೊತ್ತೊಯ್ಯಲು ಕಬ್ಬಿಣದ ಉದ್ದನೆಯ ಹಿಡಿಕೆಯುಳ್ಳ ತಳ್ಳುಗಾಡಿಗಳನ್ನು ಎಳೆದೊಯ್ಯುವ ಗಾಡಿವಾಲಾಗಳು. ಮನೆ ಮುಂದೆ ತರಕಾರಿ ಹೊತ್ತುಬರುವಂತಹ ತಳ್ಳುಗಾಡಿಗಳಲ್ಲಿನ ಪಾಪ್‌ಕಾರ್ನ್, ಚುರುಮುರಿಗೆ ಕಾಯುತ್ತಿರುವ ಜನರು... ನಮ್ಮ ಬ್ಯಾಗುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಪಕ್ಕದ ರಸ್ತೆಯಲ್ಲಿರುವ ಅಂಗಡಿಗೆ ಹೋಗಲು ಒದ್ದಾಡುವಂತಾಯಿತು. ಅಲ್ಲಲ್ಲಿ ಅಂಗಡಿಗಳಲ್ಲಿ ನನ್ನ ಬಾಟಮ್‌ಗಳಿಗಾಗಿ ವಿಚಾರಿಸಿ 'ಇಲ್ಲ ಮೇಡಂ...' ಎಂಬ ಉತ್ತರ ಕೇಳಿ ಕೇಳಿ, ಅಯ್ಯೋ ಹಾಯಾಗಿ ಮಲ್ಲೇಶ್ವರ, ಗಾಂಧಿಬಜಾರ್, ಜಯನಗರ ಕಾಂಪ್ಲೆಕ್ಸ್ ಹೀಗೆ ತಿಳಿದಿರುವ ಕಡೆ ಹೋದರಾಯಿತು. ಈಗ ಸದ್ಯ ಇಲ್ಲಿಂದ ತಪ್ಪಿಸಿಕೊಂಡು ಹೋದರೆ ಸಾಕೆನಿಸಿ, 'ಸರಿ ಅಕ್ಕ, ನನಗೆ ಇಲ್ಲಿ ಸಿಗುವ ಹಾಗಿಲ್ಲ. ಈ ಜಾತ್ರೆಯಲ್ಲಿ ಬೇರೆ ಅಂಗಡಿಗಳಿಗೆ ಹೋಗಲು ತುಂಬಾ ಕಷ್ಟ, ಏನು ಮಾಡೋಣ?' ಎಂದು ಕೇಳಿದೆ. ಅದಕ್ಕೇ ಕಾಯುತ್ತಿರುವಂತೆ 'ಹೂಂ ಕಣೆ, ನನಗೂ ಹಾಗೇ ಅನಿಸುತ್ತಿದೆ, ಇನ್ನೊಂದು ದಿನ ಬರೋಣ' ಎನ್ನುತ್ತ ಮಾತನಾಡಿಕೊಂಡು, ಬಂದ ದಾರಿಗೆ ಸುಂಕವಿಲ್ಲ ಎಂದು ಇಬ್ಬರೂ ನಂನಮ್ಮ ದಾರಿ ಹಿಡಿದೆವು.

ನನಗೇಕೋ ಮಾರುಕಟ್ಟೆ ಮನುಷ್ಯರನ್ನು ನಿಯಂತ್ರಿಸುತ್ತಿರುವ ಕುರಿತು ಬಹಳ ಬೇಸರವಾಯಿತು. ಹೆಚ್ಚೂ ಕಡಿಮೆ ಪದವಿ ಓದುವಾಗಷ್ಟೆ ನಾನು ಚೂಡಿದಾರ್ ಹಾಕತೊಡಗಿದ್ದು (ಆಗ ನಮ್ಮ ಭಾಷೆಯಲ್ಲಿ ಡ್ರೆಸ್ ಹಾಕಿಕೊಳ್ಳುವುದು – ಈಗ ನೆನೆಸಿಕೊಂಡರೆ ನಗುಬರುತ್ತದೆ). ಮೊದಲೆಲ್ಲ ಎಷ್ಟು ಚೆನ್ನಾಗಿ ಟಾಪ್, ಬಾಟಮ್, ವೇಲ್‌ವುಳ್ಳ ಸೆಟ್ ರೆಡಿಮೇಡ್ ಡ್ರೆಸ್‌ಗಳು ಸಿಗುತ್ತಿದ್ದವು. ಇಷ್ಟೆಲ್ಲ ಒಂದೊಂದಕ್ಕೂ ಒಂದೊಂದು ಕಡೆ ಹೋಗಬೇಕಾದ ಪರಿಸ್ಥಿತಿಯಿರಲಿಲ್ಲ, ನಂತರ ನಮಗಿಷ್ಟವಾದ ಮೆಟೀರಿಯಲ್ ತೆಗೆದುಕೊಂಡು ಟೈಲರ್‌ಗಳ ಬಳಿ ಕೊಟ್ಟರೆ ಅವರು ಎಷ್ಟು ಚೆನ್ನಾಗಿ ಹೊಲಿಯುತ್ತಿದ್ದರು. ಬರು ಬರುತ್ತ ನಮ್ಮ ಸೈಜಿಗೆ ಸರಿಹೊಂದುವ ಟಾಪ್‌ಗಳು ಸಿಗದೆ ಅದರ ರಿಪೇರಿಗೆ ಟೈಲರ್ ಅಂಗಡಿಗಳಿಗೆ ಅಲೆಯಬೇಕಾಗಿ ಬಂದು, ಮೆಟೀರಿಯಲ್ ಕೊಟ್ಟರೂ ಅದನ್ನು ಒಪ್ಪವಾಗಿ ಹೊಲಿಯುವ ಟೈಲರ್‌ಗಳು ಸಿಗದೆ ಒಟ್ಟಾರೆ ಪರದಾಟವೆನ್ನಿ. ನಾರ್ಮಲ್ ಚೂಡಿದಾರ್ ಪ್ಯಾಂಟ್ ಹೊಲಿಯುವಂತೆ ನಾನು ಕೊಟ್ಟಿದ್ದ ಮೆಟೀರಿಯಲ್‌ನಲ್ಲಿ ಬೇರೆಯವರು ನೀಡಿದ್ದ ಅಳತೆಯ ತ್ರೀಫೋರ್ತ್ ಪ್ಯಾಂಟ್ ಸೈಜಿಗೆ ನನಗೆ ಪ್ಯಾಂಟ್ ಹೊಲಿದುಕೊಟ್ಟ ನಮ್ಮ ಟೈಲರ್!

ಈಗ ಹೀಗೆ ಟಾಪ್ ಒಂದು ಕಡೆಯಾದರೆ, ಬಾಟಮ್ ಇನ್ನೊಂದು ಕಡೆ... ಕೆಲವು ದೊಡ್ಡ ಮಾಲ್‌ಗಳಲ್ಲಂತೂ ಎರಡೂ ಒಂದೇ ಕಡೆ ಸಿಕ್ಕರೂ ಟಾಪ್‌ಗಿಂತಲೂ ರಂಗುರಂಗಿನ, ಪ್ರಿಂಟ್ ಉಳ್ಳ